ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4213

ಸದಸ್ಯರ ಹೆಸರು : ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ)

ಉತ್ತರಿಸುವವರು : ಶ್ರೀ ಡಿ.ಟಿ.ಜಯಕುಮಾರ್ (ಪ್ರವಾಸೋದ್ಯಮ ಸಚಿವರು)

ಚುಕ್ಕೆ ಗುರುತಿನ ಪ್ರಶ್ನೆ ಸಂ: 4213

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಸಂಖ್ಯೆ	ಪ್ರಶ್ನೆ	ಉತ್ತರ
1	ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಗುರುತಿಸಲಾದ ಪ್ರವಾಸೋದ್ಯಮ ಕೇಂದ್ರಗಳು ಯಾವುವು; ಅವುಗಳ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಠಾನ ಗೊಳಿಸಿದ ಮತ್ತು ಹಮ್ಮಿಕೊಂಡ ಕಾರ್ಯಕ್ರಮಗಳ ವಿವರಗಳೇನು;	ಬಾಗಲಕೋಟೆ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಮುಖವಾದ ಪ್ರವಾಸಿ ಕೇಂದ್ರಗಳು ಯಾವುದು ಇರುವುದಿಲ್ಲ. There is no Important Tourist places in Banglkote Constituency
2	ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರಿ ಸದರಿ ಪ್ರವಾಸಿ ಕೇಂದ್ರ ಗಳಿಗೆ ನಿಗದಿಪಡಿಸಲಾದ ಅನು ದಾನದ ಮೊತ್ತ ಎಷ್ಟು (ಕಳೆದ ಮೂರು ವರ್ಷಗಳ ವಿವರ ನೀಡು ವುದು);	ಉದ್ಭವಿಸುವುದಿಲ್ಲ Does not arise

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ : ಬಾಗಲಕೋಟೆ ಕ್ಷೇತ್ರದಲ್ಲಿ ಯಾವುದೇ ಪ್ರವಾಸಿ ಕೇಂದ್ರವಿರುವುದಿಲ್ಲವೆಂದು ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಮಂಕಣ ಎನ್ನುವ ಗ್ರಾಮದಲ್ಲಿ ಬಹಳ ಪ್ರಾಚೀನವಾದ ದೇವಸ್ಥಾನ ಒಂದು ಇರುವುದರಿಂದ ಅದರ ಅಭಿವೃದ್ಧಿ ಮಾಡಬೇಕೆಂದು ನಾವು ಧರ್ಮಸ್ಥಳ ಟ್ರಸ್ಟ್‌ನವರನ್ನು ಕೇಳಿಕೊಂಡಿದ್ದೆವು. ಅವರು ಅದನ್ನು ಪರಿಶೀಲಿಸಿ, ಇದು ರಾಷ್ಟ್ರಕೂಟರ ಕಾಲದ ದೇವಸ್ಥಾನ ವೆಂದು ವರದಿಯನ್ನು ಕೊಟ್ಟಿರುವುದರಿಂದ, ಅದು ಕೂಡಲಸಂಗಮಕ್ಕೆ ಬಹಳ ಹತ್ತಿರವಾಗುವುದರಿಂದ

ಅದನ್ನು ಜೀರ್ಣೋದ್ಧಾರ ಮಾಡಿ ಒಳ್ಳೆಯ ಪ್ರವಾಸಿ ಕೇಂದ್ರವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ, ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿದ್ದಾರೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಬಾಗಲಕೋಟೆಯ ಜಿಲ್ಲೆಯಲ್ಲಿ ಬಹಳ ವಿಶ್ವಪರಂಪರೆಯನ್ನು ಬಿಂಬಿಸುವಂತಹ ಪ್ರವಾಸಿ ತಾಣಗಳಿವೆ, ಅದರಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು ಇವೆಲ್ಲವೂ ಕೂಡ ಇದೆ. ಅವರು ಕೇಳುತ್ತಿರುವುದು, ಮಂಕಣಿ ಎನ್ನುವ ಒಂದು ಜಾಗದ ಬಗ್ಗೆ ಅದರ ಬಗ್ಗೆ ಇದುವರೆಗೆ ಪ್ರವಾಸೋದ್ಯಮ ಇಲಾಖೆಗೆ ಮಾಹಿತಿ ಇಲ್ಲ. ಅವರೇನು ಸನ್ಮಾನ್ಯ ವೀರೇಂದ್ರ ಹೆಗ್ಡೆಯವರಿಂದ ವರದಿಯನ್ನು ತರಿಸಿದ್ದಾರೆ. ಅದನ್ನು ನಮಗೆ ಸಲ್ಲಿಸಿದರೆ, ಅದು ನಿಜವಾಗಿಯು ಪ್ರವಾಸಿಗರ ಸ್ಥಳವಾಗಿದ್ದರೆ ಅದನ್ನು ಅಭಿವೃದ್ಧಿಪಡಿಸಲು ಏನು ತೊಂದರೆ ಇಲ್ಲವೆಂದು ಭಾವಿಸುತ್ತೇನೆ. ಈಗಾಗಲೇ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಈಗ ಸುಮಾರು ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳಲ್ಲಿ ಅಲ್ಲಿಗೆ ಬೇಕಾದ ಯಾತ್ರಾಸ್ಥಳ ಅಭಿವೃದ್ಧಿ ಮಾಡುವ ಸಲುವಾಗಿ, ಅದರಲ್ಲಿ ನಮ್ಮ ಕೂಡಲಸಂಗಮದಲ್ಲು ಕೂಡ ಯಾತ್ರಾಸ್ಥಳವನ್ನು ಕಟ್ಟಿ, ಅಲ್ಲಿ ಈಗಾಗಲೇ ಪ್ರವಾಸಿಗರಿಗೆ ಸೌಲಭ್ಯವನ್ನು ಒದಗಿಸುತ್ತಿದ್ದೇವೆ. ಜೊತೆಗೆ ಈಗಾಗಲೇ ಎಂಟು ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಕೂಡ ಕಳುಹಿಸಿ ಈಗ ಆರು ಕೋಟಿ, ನಲವತ್ತು ಲಕ್ಷ ರೂಪಾಯಿಗಳು ಬಿಡುಗಡೆಯಾಗಿವೆ. ಮುಂದೆ ಬಾದಾಮಿ, ಐಹೊಳೆ, ಪಟ್ಟದಕಲ್ಲು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಅದರ ಜೊತೆಗೆ ಈ ಮಂಕಣಿಯನ್ನು ಕೂಡ ಸೇರಿಸಲು ಸಾಧ್ಯವಾಗುವುದಿದ್ದರೆ ಪ್ರಯತ್ನ ಮಾಡುತ್ತೇವೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕೂಡ ಹತ್ತು ಹತ್ತು ಕೋಟಿ ರೂಪಾಯಿಗಳ ವೆಚ್ಚದಿಂದ ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿ ಪಡಿಸಬೇಕೆನ್ನುವ ದೃಷ್ಟಿಯಿಂದ ಈಗಾಗಲೇ ಕೇಂದ್ರ ಸರ್ಕಾರಕ್ಕೆ 611 ಕೋಟಿ ರೂಪಾಯಿಗಳ ಯೋಜನೆಯನ್ನು ಸಲ್ಲಿಸಿದ್ದೇವೆ. ಬಹುಶಃ ಮುಂದಿನ ದಿವಸ ಗಳಲ್ಲಿ ಆ ಪ್ರಸ್ತಾವನೆಯೆಲ್ಲಾ ಅಂಗೀಕಾರವಾಗಿ ಬಂದರೆ ಮಂಕಣಿ ಎನ್ನುವ ಸ್ಥಳವನ್ನು ಕೂಡ ಅಭಿವೃದ್ಧಿಪಡಿಸುವುದಕ್ಕೆ ಇಚ್ಚೆಪಡುತ್ತೇನೆ.